ಪ್ರಾರ್ಥನೆ

# ಮೂರು ಪ್ರಾರ್ಥನೆಗಳು

**ಹೊನ್ನ ಹಾವುಗೆಯ ಮೆಟ್ಟಿದವನ**
**ಮಿಡಿಮುಟ್ಟದ ಕೆಂಜೆಡೆಯವನ,**
**ಮೈಯಲ್ಲಿ ವಿಭೂತಿಯ ಧರಿಸಿದವನ,**
**ಕರದಲ್ಲಿ ಕಪಾಲವ ಪಿಡಿದವನ,**
**ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ ;**
**ನಂಬಿಗೆ ಕುಂಟಣಿಯಾದವನ,**
**ಚೋಳಂಗೆ ಹೊನ್ನಮಳೆಯ ಕರೆದವನ,**
**ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯದಲ್ಲಿಪ್ಪವನ,**
**ಮಾಡಿದ ಪೂಜೆಯಲೊಪ್ಪುವನ,**
**ಕೂಡಲಸಂಗಯ್ಯನೆಂಬವನ!**

— ಬಸವಣ್ಣ

**ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ**
**ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।**
**ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ**
**ತಸ್ಮಾನ್ಮಾಂ ಶರಣಾಗತಂ ಕರುಣಯಾ ತ್ವಂ ರಕ್ಷ ರಕ್ಷಾಧುನಾ ॥**

ಶಂಭುವೆ, ನೋಡನೋಡುತ್ತಲೆ ಆಯುಸ್ಸು ನಾಶವಾಗುತ್ತದೆ; ಯೌವನವು ದಿನದಿನಕ್ಕೂ ಕ್ಷಯವಾಗುತ್ತದೆ; ಕಳೆದು ಹೋದ ದಿನಗಳು ಮತ್ತೆ ಹಿಂದಿರುಗುವುದಿಲ್ಲ; ಕಾಲವು ಇಡೀ ಜಗತ್ತನ್ನೇ ನುಂಗುತ್ತದೆ; ಲಕ್ಷ್ಮಿಯಾದರೋ ನೀರಿನಲ್ಲಿ ಚಲಿಸುವ ಅಲೆಯಂತೆ ಚಂಚಲಳು; ಮಿಂಚಿನಂತೆ ಕ್ಷಣಕಾಲ ಮಿಂಚಿ ಮರಳುವ ಸ್ವಭಾವವುಳ್ಳದ್ದು ಈ ಜೀವಿತ! ಆದ್ದರಿಂದ ಶರಣು ಬಂದಿರುವ ನನ್ನನ್ನು ಈಗಲೇ ಕರುಣೆಯಿಂದ ನೀನು ರಕ್ಷಿಸು, ರಕ್ಷಿಸು.

— ಶಂಕರಾಚಾರ್ಯ,
*'ಶಿವಾಪರಾಧಕ್ಷಮಾಪಣಸ್ತೋತ್ರಮ್'*

**ತವಾನುಭೂತಿ ಸಂಭೂತ ಪ್ರೀತಿಕಾರಿತ ದಾಸತಾಮ್। ದೇಹಿ ಮೇ ಕೃಪಯಾ ನಾಥ ! ನ ಜಾನೇ ಗತಿಮನ್ಯಥಾ ಸರ್ವಾವಸ್ಥೋಚಿತಾಶೇಷ ಶೇಷತ್ವೈಕರತಿಸ್ತವ । ಭವೇಯಂ ಪುಂಡರೀಕಾಕ್ಷ ! ತ್ವಮೇವೈವಂ ಕುರುಷ್ವ ಮಾಮ್ ।**

ನಿನ್ನ ಅನುಭವವನ್ನು ಹೊಂದಿದುದರಿಂದ ನಿನ್ನಲ್ಲಿ ಪ್ರೀತಿಯುಂಟಾಗಲಿ. ಆ ಪ್ರೀತಿಯಿಂದ ನಾನು ನಿನ್ನ ದಾಸನಾಗುವಂತೆ ಕೃಪೆಯಿಂದ ಅನುಗ್ರಹಿಸು. ನಿನ್ನ ಹೊರತು ಬೇರೆ ಆಶ್ರಯವನ್ನು ನಾನು ಅರಿಯೆನು. ಪುಂಡರೀಕಾಕ್ಷ, ಎಲ್ಲಾ ಅವಸ್ಥೆಗಳಲ್ಲೂ , ಎಲ್ಲವೂ ಕಳೆದ ಮೇಲೆ ಉಳಿಯುವ ನಿನ್ನ ಪ್ರೀತಿ ಸದಾ ನನ್ನಲ್ಲಿ ಇರುವಂತೆ ಅನುಗ್ರಹಿಸು.

— ಶ್ರೀ ರಾಮಾನುಜ,
*'ಶ್ರೀರಂಗ ಗದ್ಯ'*

ಸೂಕ್ತಿಪ್ರಭ

## ಗ್ರೀಕ್ ಸೂಕ್ತಿಗಳು

ನಾನು ನನ್ನ ಜೀವನಕ್ಕಾಗಿ ನನ್ನ ತಂದೆಗೆ ಕೃತಜ್ಞನಾಗಿದ್ದೇನೆ; ಆದರೆ ನನ್ನ ಉತ್ತಮ ಜೀವನಕ್ಕಾಗಿ ನನ್ನ ಗುರುಗಳಿಗೆ ಕೃತಜ್ಞನಾಗಿದ್ದೇನೆ.

—ಪ್ಲೂಟಾರ್ಕ್

ಅಣು ಮತ್ತು ಖಾಲಿ ಆಕಾಶವಲ್ಲದೆ ಬೇರೆ ಏನೂ ಅಸ್ತಿತ್ವ ಹೊಂದಿಲ್ಲ; ಉಳಿದುವೆಲ್ಲ ಬರೀ ಅಭಿಪ್ರಾಯಗಳು, ಅಷ್ಟೆ.

—ಅರಿಸ್ಟಾಟಲ್

ಒಂದೇ ನದಿಗೆ ಯಾವ ಮನುಷ್ಯನೂ ಎರಡು ಬಾರಿ ಕಾಲಿಡಲಾರ. ಏಕೆಂದರೆ ಅದು ಅದೇ ನದಿಯಾಗಿರುವುದಿಲ್ಲ, ಅವನೂ ಅದೇ ಮನುಷ್ಯನಾಗಿರುವುದಿಲ್ಲ.

—ಹೆರಾಕ್ಲಿಟಸ್

ನಿನ್ನ ಬಳಿ ಇಲ್ಲದ್ದನ್ನೇ ಬಯಸುತ್ತ, ನಿನ್ನ ಬಳಿ ಇರುವುದನ್ನು ಕಳೆದುಕೊಳ್ಳಬೇಡ.

—ಎಪಿಕ್ಯೂರಸ್

ನಿನಗೆ ಯಾವಾಗ ವಿವೇಕ ಮತ್ತು ಒಳನೋಟ ಇವುಗಳು ಉಸಿರಿನಷ್ಟೇ ಅನಿವಾರ್ಯವಾಗಿ ಬೇಕಾಗುವುವೋ, ಆಗ ಮಾತ್ರವೇ ನಿನಗೆ ಅವು ದೊರಕುವುವು.

—ಸಾಕ್ರಟೀಸ್

ನೀನು ಬಿಟ್ಟುಹೋಗುವುದು ನಿನ್ನ ಸ್ಮಾರಕಶಿಲೆಯಲ್ಲಿ ಕೆತ್ತಲಾಗುವ ವಾಕ್ಯವಲ್ಲ, ಇತರರ ಬಾಳಿನಲ್ಲಿ ನೀನು ಏನನ್ನು ಹೆಣೆದು ಹೋಗಿರುವೆಯೋ ಅದು ಮಾತ್ರ ಉಳಿಯುವುದು.

—ಪೆರಿಕ್ಲಿಸ್

ಪ್ರೀತಿಯೆಂಬುದು ಒಳಿತಿನ ಆನಂದ, ವಿವೇಕಿಗಳ ಅದ್ಭುತ, ದೇವತೆಗಳ ಅಚ್ಚರಿ!

—ಪ್ಲೇಟೋ

ಉತ್ತಮ ವ್ಯಕ್ತಿ ಯಾರೆಂಬುದನ್ನು ಕಾಲ ಮಾತ್ರವೇ ಹೇಳುವುದು; ಆದರೆ ಯಾರು ಕೆಟ್ಟವ ಎಂಬುದನ್ನು ಒಂದೇ ದಿನದಲ್ಲಿ ನೀನು ಹೇಳಬಲ್ಲೆ.

—ಸೊಫೊಕ್ಲಿಸ್